**ದಿಃ- 20.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿಸವಾಲು ಃ ಪ್ರತಿವಾದಿ ನಂ.1 ಪರ ಶ್ರೀ. ಸಿ.ಎನ್.ಕೆ ವಕೀಲರಿಂದ ಃ**

28. ಹಿಂದಿನ ವಿಚಾರಣೆಯಲ್ಲಿ ತೋರಿಸಿದ ಪತ್ರವು ನಾನು ನನ್ನ ತಂದೆಗೆ ಬರೆದ ಪತ್ರವಾಗಿದ್ದು ಅದರಲ್ಲಿ ಊರಿನಲ್ಲಿರುವ ಜಮೀನನ್ನು ಮಾರಿ ನನಗೆ ಮತ್ತು ನನ್ನ ಅಣ್ಣನಿಗೆ ಭಾಗ ನೀಡಬೇಕೆಂದು ಕೇಳಿದ್ದೆ ಎಂದರೆ ಸರಿಯಲ್ಲ. ಮತ್ತು ಅದೇ ಪತ್ರದಲ್ಲಿ ನನ್ನ ತಂದೆಯವರು ರೂ. ಐದು ಲಕ್ಷ ಎಪ್ಪತ್ತೈದು ಸಾವಿರ ಹಣ ಕೊಟ್ಟಿದ್ದಾರೆ ಎಂದು ಬರೆದಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಯಾವುದೇ ಪತ್ರ ಬರೆದಿಲ್ಲ ಎಂದು ಹೇಳುತ್ತಾರೆ . ಅದೇ ಪತ್ರದಲ್ಲಿ ನನಗೆ ಆಸ್ತಿ ಪಾಲು ನೀಡದಿದ್ದರೆ ನನ್ನ ತಂದೆಯವರನ್ನು ಸುಮ್ಮನೇ ಬಿಡುವುದಿಲ್ಲ ಮತ್ತು ಭದ್ರಕಾಳಿ ಆಗಬೇಕಾಗುತ್ತದೆ ಎಂದು ಬರೆದಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ನಾನು ಪತ್ರದಲ್ಲಿ ಜೀವ ಬೆದರಿಕೆ ಹಾಕಿದ್ದೇನೆ ಎಂದರೆ ಸರಿಯಲ್ಲ.

29. ನಿಪಿ 59 ರಲ್ಲಿ ನನ್ನ ತಾಯಿ ಯಾವಾಗ ಎಷ್ಟು ರೂಪಾಯಿ ಮತ್ತು ಯಾವ ಉದ್ದೇಶಕ್ಕಾಗಿ ಸಾಲವನ್ನು ಪಡೆದಿದ್ದಾರೆ ಎಂದು ನಮೂದು ಇಲ್ಲ ಎಂದರೆ ಸರಿ . ನಿಪಿ 59 ನ್ನು ಈ ದಾವೆಗೋಸ್ಕರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

30. ನಿಪಿ 60 ನನಗೆ ಸಂಬಂಧಿಸಿದ ಬ್ಯಾಂಕ್ ಖಾತೆ 2015 – 2018 ರ ಸಾಲಿನ ಹಾಳೆಯಾಗಿದ್ದು ಅದರಲ್ಲಿ 1995 ರ ನನ್ನ ತಂದೆಗೆ ಸ್ವತ್ತನ್ನು ಖರೀದಿಸಲು ಹಣ ನೀಡಿದ್ದ ಬಗ್ಗೆ ಉಲ್ಲೇಖ ಕಂಡು ಬಂದಿಲ್ಲ ಎಂದರೆ ಸರಿ .

31. ನಿಪಿ 61 ನನಗೆ ಸಂಬಂಧಿಸಿದ ದಾಖಲೆಯಾಗಿದ್ದು ಇದು ವಾದ ಪತ್ರದ ಸ್ವತ್ತಿನ ತಪಶೀಲಿನ ಐಟಂ ನಂಬರ್ 1 ನ್ನು ನನ್ನ ತಂದೆಯವರು ಖರೀದಿಸಿದ ಕಾಲಕ್ಕೆ ಸಂಬಂಧಿಸಿದ ದಾಖಲೆಯಲ್ಲ ಎಂದರೆ ಸರಿ. ಇದರಲ್ಲಿ ನನ್ನ ತಂದೆಗೆ ಕ್ರಯದ ಸಂಬಂಧ ಹಣ ಕೊಟ್ಟಿದ್ದ ಬಗ್ಗೆ ಯಾವುದೇ ಹಣದ ಉಲ್ಲೇಖ ಇಲ್ಲ ಎಂದರೆ ಸರಿ .

32. ನಿಪಿ 62 ನನ್ನ ತಾಯಿಯ ಬ್ಯಾಂಕ್ ಖಾತೆಯಾಗಿದ್ದು ಇದು 2013 ರ ನಂತರ ಬ್ಯಾಂಕ್ ಖಾತೆ ತೆರೆದ ದಾಖಲೆಯಾಗಿರುತ್ತದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಅದು ನನ್ನ ತಾಯಿಯಾವರು ನಿವೃತ್ತಿ ಹೊಂದಿದ ಬಗ್ಗೆ ಪಿಂಚಣಿ ಬರುವ ಸಲುವಾಗಿ ತೆರೆದ ಖಾತೆ ಎಂದು ನುಡಿಯುತ್ತಾರೆ . ನಿಪಿ 62 ರಲ್ಲಿಯೂ ಸಹ ನನ್ನ ತಾಯಿಯ ಖಾತೆಯಿಂದ ನನ್ನ ತಂದೆಯ ಖಾತೆಗೆ ಹಣ ವರ್ಗಾವಣೆಯಾದ ಬಗ್ಗೆ ನಮೂದು ಇಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಅದರಲ್ಲಿ ನನ್ನ ತಂದೆಯ ಹೆಸರು ಹಾಕಿರುವುದಿಲ್ಲ. ಆದರೆ ಅವರಿಗೆ ನೀಡಿದ ಚೆಕ್ ಆಗಿರುತ್ತದೆ ಎಂದು ನುಡಿಯುತ್ತಾರೆ . ನನ್ನ ತಂದೆಗೆ ಯಾವುದೇ ಹಣ ಪಾವತಿಯಾಗಿಲ್ಲ ಹಾಗೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

33. ನಿಪಿ 63 ರಲ್ಲಿ ನಾನು ನನ್ನ ತಾಯಿಯ ಖಾತೆಯಿಂದ ಹಣ ಪಡೆದ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿ . (ಸಾಕ್ಷಿಯು ವಕೀಲರೊಂದಿಗೆ ವಾದಕ್ಕೆ ಇಳಿದಿರುತ್ತಾರೆ).

34. ನಿಪಿ 63 ನನ್ನ ತಂದೆ 1 ನೇ ಪ್ರತಿವಾದಿಯವರ ಹೆಸರಿನಲ್ಲಿದೆ. ಈ ದಾಖಲೆಯನ್ನು ಅವರು ಸಂಬಳ ಎಷ್ಟು ಪಡೆಯುತ್ತಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ . ನನ್ನ ತಂದೆಗೆ ಸ್ವಯಂ ನಿವೃತ್ತಿ ಪಡೆಯುವ ಸಮಯಕ್ಕೆ ಮಾಸಿಕ ರೂ. 24 ಸಾವಿರ ವೇತನ ಪಡೆಯುತ್ತಿದ್ದರು ಎಂದರೆ ಸರಿ .

35. ನಿಪಿ 64 ನನ್ನ ತಾಯಿಯ ಹೆಸರಿನಲ್ಲಿದ್ದು ಇದರಲ್ಲಿಯೂ ಸಹ ನನ್ನ ತಂದೆಗೆ ವಾದ ಪತ್ರದ ತಪಶೀಲಿನ 1 ನೇ ಐಟಂ ಆಸ್ತಿಯನ್ನು ಖರೀದಿಸಲು ನನ್ನ ತಾಯಿ ಹಣ ನೀಡಿದ್ದ ಬಗ್ಗೆ ಯಾವುದೇ ಉಲ್ಲೇಖ ಇಲ್ಲ ಎಂದರೆ ಸರಿ .

36. ನಿಪಿ 65 ನನ್ನ ತಂದೆಯವರು ನನ್ನನ್ನು ಓದಿಸಿ ನನಗೆ ಸಹಾಯ ಮಾಡಿದ್ದರಿಂದ ನಾನು ಕರ್ನಾಟಕ ಗ್ರಾಮೀಣ ಬ್ಯಾಂಕ್ ನಲ್ಲಿ 2015 ನೇ ಇಸವಿಯಲ್ಲಿ ಸಹಾಯಕ ವ್ಯವಸ್ಥಾಪಕರಾಗಿ ನೇಮಕ ಗೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಓದಿಸಿ ಸಹಾಯ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಕೆಲಸಕ್ಕೆ ಹೋಗಿ ಕೈ ತುಂಬ ವೇತನವನ್ನು ಪಡೆದರೂ ಸಹ ನನ್ನ ತಂದೆಗೆ

ಯಾವುದೇ ಖರ್ಚಿಗೆ ಹಣ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ.

37. ನಿಪಿ 66 ರಲ್ಲಿ ನಾನು ಆಭರಣವನ್ನು ಖರೀದಿಸಿದ ಬಗ್ಗೆ ಮಾತ್ರ ಉಲ್ಲೇಖವಿದ್ದು ಆದರೆ ನನ್ನ ತಂದೆಗೆ ಆಭರಣ ನೀಡಿದ ಬಗ್ಗೆ ಉಲ್ಲೇಖವಿಲ್ಲ ಎಂದರೆ ಸರಿಯಲ್ಲ. ನಿಪಿ 66 ರ ಆಭರಣವನ್ನು ಖರೀದಿಸಲು ನನ್ನ ತಂದೆಯೇ ನನಗೆ ಸಹಾಯ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಆಭರಣ ಇವತ್ತಿಗೂ ನನ್ನ ಸ್ವಾಧೀನದಲ್ಲಿಯೇ ಇದೆ ಆದರೆ ಯಾವತ್ತೂ ನನ್ನ ತಂದೆಗೆ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಆ ಆಭರಣ ನೀಡಿದ ಬಗ್ಗೆ ತೋರಿಸಲು ನನ್ನಲ್ಲಿ ಯಾವುದೇ ದಾಖಲೆಗಳು ಇಲ್ಲ .

38. ನನ್ನ ತಾಯಿಯ ಹೆಸರಿನಲ್ಲಿ ಪಿಗೋ ಕೆಎ 02 ಎಂ ಹೆಚ್ 6497 ಕಾರ್ ಇತ್ತು ಎಂದರೆ ಸರಿ . ಅದು ಮುಂಚಿನಿಂದಲೂ ತಂದೆಯ ಹತ್ತಿರ ಇತ್ತು . ಈಗ ಯಾರ ಬಳಿ ಇದೆ ಎಂದು ನನಗೆ ಗೊತ್ತಿಲ್ಲ. ಈ ಕಾರ್ ನನ್ನ ಅಣ್ಣನ ಸ್ವಾ ಧೀನದಲ್ಲಿದ್ದು ಈಗ ಅವರೇ ಉಪಯೋಗಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

39. ನನ್ನ ತಾಯಿ ಹೆಸರಿನಲ್ಲಿದ್ದ ಸ್ಕೂಟರ್ ಕೆ ಎ 02 ಜೆ ಕೆ 5019 ನನ್ನ ಬಳಿ ಇದೆ ಎಂದರೆ ಸರಿಯಲ್ಲ. ಅದು ಪ್ರಸ್ತುತ ನನ್ನ ತಂದೆಯ ಬಳಿ ಇದೆ . ನನ್ನ ತಂದೆಗೆ ನೀಡದೇ

ಇದ್ದರೂ ಮೇಲಿನ ಎರಡು ವಾಹನಗಳನ್ನು ನಾನು ಮತ್ತು ನನ್ನ ಅಣ್ಣ ಉಪಯೋಗಿಸುತ್ತಿದ್ದೇವೆ ಮತ್ತು ಈ ಬಗ್ಗೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

40. ನನ್ನ ತಾಯಿಯ ಅವರ ಆದಾಯಕ್ಕಿಂತ ಹೆಚ್ಚಿ ನ ಹಣ ವ್ಯಯ ಮಾಡಿ ವಿಲಾಸಿ ಜೀವನ ಮಾಡುವ ಶೋಕಿ ಇತ್ತು ಎಂದರೆ ಸರಿಯಲ್ಲ. ನನಗೆ ವಿದ್ಯೆ ಮತ್ತು ಉದ್ಯೋಗ ಹಾಗೂ ಜೀವಿಸಲು ಬೇಕಾದ ವೇತನ ಇರುವುದರಿಂದ ನನ್ನ ತಂದೆಗೆ ಸೇರಿದ ಸ್ವತ್ತಿನಲ್ಲಿ ಭಾಗ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ನಾನು , ನನ್ನ ಅಣ್ಣ ಮತ್ತು ನನ್ನ ಚಿಕ್ಕಮ್ಮ ಧನಲಕ್ಷ್ಮಿರವರ ಸೇರಿ ಮಾನಸಿಕ ಮತ್ತು ದೈಹಿಕ ಕಿರುಕುಳವನ್ನು ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

41. ನನ್ನ ತಂದೆಯ 2 ನೇ ಹೆಂಡತಿಯ ಮಗಳು ನನ್ನ ತಂದೆಯ ಜೀವನ ಮತ್ತು ಆರೋಗ್ಯಕ್ಕೆ ಸಹಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನನ್ನ ತಂದೆಯ 2 ನೇ ಹೆಂಡತಿಯ ಮಗಳು ಎಂದರೆ ಸರಿಯಲ್ಲ. ವಾದ ಪತ್ರದ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕಿಲ್ಲದಿದ್ದರೂ ಸುಳ್ಳು ಸಾಧನೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(1 ನೇ ಪ್ರತಿವಾದಿ ಪರ ವಕೀಲರು ತಮ್ಮ ಪಾಟೀಸವಾಲು ಮುಗಿದಿರುತ್ತದೆ ಎಂದು ಹೇಳುತ್ತಾರೆ ).

ಪಾಟೀಸವಾಲು ಃ 2 ನೇ ಪ್ರತಿವಾದಿ ಪರ ವಕೀಲರು ಪಾಟೀಸವಾಲನ್ನು ಮಾಡಲು ಸಮಯಾವಕಾಶವನ್ನು ಕೋರಿರುತ್ತಾರೆ .

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**